ಕರ್ನಾಟಕ ಸರ್ಕಾರ

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಪಪೂಶಿ/ಶೈಶಾ -04/ತ ಕು 03/3/2016 -17 ದಿನಾಂಕ:/3-02-2017.

ಜ್ಞಾಪನ

ವಿಷಯ: 2016-17ನೇ ಸಾಲಿಗೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ವಿಶೇಷ ತರಗತಿ ಕಾರ್ಯಕ್ರಮಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 273 ಯೋಸಕ 2016, ಬೆಂಗಳೂರು, ದಿನಾಂಕ: 03-10-2016.

2. ಈ ಕಛೇರಿ ಜ್ಞಾಪನ ಸಂಖ್ಯೆ: ಪಪೂಶಿಇ/ಶೈಶಾ-04/ತ.ಕು 03/2/2016-17, ದಿನಾಂಕ: 06-12-2016.

****

**ಪ್ರಸ್ತಾವನೆ:-**

2016-17ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಧ್ಯಂತರ ರಜಾ ದಿನಗಳಲ್ಲಿ (ದಿನಾಂಕ: 08-10-2016ರಿಂದ 23-10-2016ರವರೆಗೆ) 7 ವಿಷಯಗಳಲ್ಲಿ ವಿಶೇಷ ತರಗತಿಗಳನ್ನು ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರದ ಒಂದು ನೋಡಲ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲು ಜಿಲ್ಲಾ ಉಪನಿರ್ದೇಶಕರುಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ತಿಳಿಸಲಾಗಿತ್ತು. ವಿಶೇಷ ತರಗತಿಗಳನ್ನು ನಡೆಸಿಕೊಡುವ ಪ್ರತಿ ತಾಲ್ಲೂಕು ಕೇಂದ್ರದ ನೋಡಲ್ ಕಾಲೇಜಿಗೆ ಸಾದಿಲ್ವಾರ ವೆಚ್ಚಕ್ಕಾಗಿ ರೂ 20,000/-ಗಳನ್ನು ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉಪನ್ಯಾಸಕರು/ವಿಷಯ ತಜ್ಞರುಗಳಿಗೆ ಸೂಕ್ತ ಸಂಭಾವನೆಗಾಗಿ ಒಬ್ಬರಿಗೆ ರೂ 500/-ರಂತೆ ಪ್ರತಿ ಅಧಿವೇಶನಕ್ಕಾಗಿ ಅನುದಾನವನ್ನು ಲೆಕ್ಕಶೀರ್ಷಿಕೆ 2202-02-108-0-01-422(ಎಸ್‌ಸಿಪಿ) /423 (ಟಿ.ಎಸ್.ಪಿ)ರಡಿಯಲ್ಲಿ ಪ್ರತಿ ಜಿಲ್ಲೆಗೆ ರೂ 8,00,000/-(ರೂ ಎಂಟು ಲಕ್ಷ)ಗಳಂತೆ ಒಟ್ಟು 31 ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ರೂ2,48,00,000/-(ಎರಡು ಕೋಟಿ ನಲ್ವತ್ತ ಎಂಟು ಲಕ್ಷಗಳನ್ನು ಮಾತ್ರ)ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2016-17ನೇ ಸಾಲಿನಲ್ಲಿ ಜಿಲ್ಲಾ ಉಪನಿರ್ದೇಶಕರುಗಳು ನೀಡಿರುವ ಮಾಹಿತಿಯನ್ವಯ ತರಗತಿಗಳನ್ನು ನಡೆಸಿರುವುದಕ್ಕೆ ಅಗತ್ಯವಿರುವ ಜಿಲ್ಲೆಗಳಿಗೆ ಎರಡನೇ ಕಂತಿನ ಅನುದಾನವನ್ನು ಲೆಕ್ಕಶೀರ್ಷಿಕೆ 2202-02-108-0-01-422(ಎಸ್‌ಸಿಪಿ) /423 (ಟಿ.ಎಸ್.ಪಿ)ರಡಿಯಲ್ಲಿ ಜಿಲ್ಲಾ ಉಪನಿರ್ದೇಶಕರುಗಳಿಗೆ ಹೆಚ್ಚುವರಿ ಅನುದಾನವಾಗಿ ರೂ 67,39,500/-ಗಳನ್ನು (ಅರವತ್ತ ಏಳು ಲಕ್ಷದ ಮೂವತ್ತ ಒಂಬತ್ತು ಸಾವಿರದ ಐದು ನೂರು ರೂಗಳನ್ನು ಮಾತ್ರ) ಕೆಳಕಂಡ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಬಿಡುಗಡೆ ಮಾಡುವ ಕುರಿತು ಆದೇಶಿಸಿದೆ.

| | District | ವಿಶೇಷ ತರಗತಿಗಳಿಗೆ ಬಿಡುಗಡೆಯಾಗಬೇಕಾದ ಒಟ್ಟು ಅನುದಾನ | ಈಗಾಗಲೇ ಬಿಡುಗಡೆಯಾದ ಅಂಧಾಜು ಮೊತ್ತ | ಹೆಚ್ಚುವರಿಯಾಗಿ ಬಿಡುಗಡೆ ಮಾಡಬೇಕಾದ ಅನುದಾನ | ಜಿಲ್ಲೆಗಳಲ್ಲಿ ಉಳಿಕೆಯಾಗಿರುವ ಅನುದಾನದ ವಿವರ |
|---|---|---|---|---|---|
| 1 | ಬೆಂಗಳೂರು-ಉತ್ತರ | 923000 | 800000 | 123000 | |
| 2 | ಬೆಂಗಳೂರು-ದಕ್ಷಿಣ | 535500 | 800000 | | -264500 |
| 3 | ಬೆಂಗಳೂರು-ಗ್ರಾಮಾಂತರ | 881000 | 800000 | 81000 | |
| 4 | ರಾಮನಗರ | 814000 | 800000 | 14000 | |
| 5 | ಬಳ್ಳಾರಿ | 1418000 | 800000 | 618000 | |

| | | | | | |
|---|---|---|---|---|---|
| 6 | ಬೆಳಗಾವಿ | 964000 | 800000 | 164000 | |
| 7 | ಬಾಗಲಕೋಟ | 804000 | 800000 | 4000 | |
| 8 | ವಿಜಾಪುರ | 615000 | 800000 | | -185000 |
| 9 | ಬೀದರ | 686000 | 800000 | | -114000 |
| 10 | ದಾವಣಗೆರೆ | 1223500 | 800000 | 423500 | |
| 11 | ಚಿತ್ರದುರ್ಗ | 1212500 | 800000 | 412500 | |
| 12 | ಚಿಕ್ಕಮಗಳೂರು | 1379500 | 800000 | 579500 | |
| 13 | ಗದಗ | 493000 | 800000 | | -307000 |
| 14 | ಹಾವೇರಿ | 596500 | 800000 | | -203500 |
| 15 | ಧಾರವಾಡ | 342000 | 800000 | | -458000 |
| 16 | ಗುಲ್ಬರ್ಗಾ | 819000 | 800000 | 19000 | |
| 17 | ಯಾದಗಿರಿ | 315000 | 800000 | | -485000 |
| 18 | ಹಾಸನ | 1572500 | 800000 | 772500 | |
| 19 | ಚಿಕ್ಕಬಳ್ಳಾಪುರ | 969500 | 800000 | 169500 | |
| 20 | ಕೋಲಾರ | 1540000 | 800000 | 740000 | |
| 21 | ಚಾಮರಾಜನಗರ | 873000 | 800000 | 73000 | |
| 22 | ಮಂಡ್ಯ | 663000 | 800000 | | -137000 |
| 23 | ಮೈಸೂರು | 2172500 | 800000 | 1372500 | |
| 24 | ಉತ್ತರ ಕನ್ನಡ | 707000 | 800000 | | -93000 |
| 25 | ಕೊಪ್ಪಳ | 601000 | 800000 | | -199000 |
| 26 | ರಾಯಚೂರು | 686000 | 800000 | | -114000 |
| 27 | ಉಡುಪಿ | 616000 | 800000 | | -184000 |
| 28 | ದಕ್ಷಿಣ ಕನ್ನಡ | 959000 | 800000 | 159000 | |
| 29 | ಶಿವಮೊಗ್ಗ | 857500 | 800000 | 57500 | |
| 30 | ತುಮಕೂರು | 1757000 | 800000 | 957000 | |
| 31 | ಕೊಡಗು | 435000 | 800000 | | -365000 |
| | | 28430500 | 24800000 | 6739500 | -3109000 |

**ಅದೇಶ:-**

2016-17ನೇ ಶೈಕ್ಷಣಿಕ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮಧ್ಯಂತರ ರಜಾ ದಿನಗಳಲ್ಲಿ (ದಿನಾಂಕ: 08-10-2016ರಿಂದ 23-10-2016ರವರೆಗೆ) ನಡೆಸಿದ ವಿಶೇಷ ತರಗತಿಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಉಪನಿರ್ದೇಶಕರುಗಳು ನೀಡಿರುವ ಮಾಹಿತಿಯನ್ವಯ ಹೆಚ್ಚಿನ ಅನುದಾನವನ್ನು ಅಗತ್ಯವಿರುವ ಜಿಲ್ಲೆಗಳಿಗೆ ಲೆಕ್ಕಶೀರ್ಷಿಕೆ 2202-02-108-0-01-422(ಎಸ್‌ಸಿಪಿ) /423 (ಟಿ.ಎಸ್.ಪಿ)ರಡಿಯಲ್ಲಿ ಜಿಲ್ಲಾ ಉಪನಿರ್ದೇಶಕರುಗಳಿಗೆ ಹೆಚ್ಚುವರಿ ಅನುದಾನವಾಗಿ ರೂ 67,39,500/-ಗಳನ್ನು (ಅರವತ್ತ ಏಳು ಲಕ್ಷದ ಮೂವತ್ತ ಒಂಭತ್ತು ಸಾವಿರದ ಐದು ನೂರು ರೂಗಳನ್ನು ಮಾತ್ರ) ಎರಡನೇ ಕಂತಿನಲ್ಲಿ ಕೆಳಕಂಡ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಬಿಡುಗಯನ್ನು ಕೆಳಗಿನ ಷರತ್ತಿನ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಲು ಆದೇಶಿಸಿದೆ.

<u>ವಿಶೇಷ ಸೂಚನೆ:</u> ಮೊದಲ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆಯವರುಗಳು ಇಲ್ಲಿಯವರೆಗೆ ಬಳಕೆಯಾಗಿರುವ ಅನುದಾನದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಇಲಾಖೆಗೆ ಸಲ್ಲಿಸುವ ಕುರಿತು ಕ್ರಮ ಕೈ ಗೊಳ್ಳಲು ಸೂಚಿಸಿದೆ. ತಪ್ಪಿದಲ್ಲಿ

ಮುಂದಿನ ಆಗುಹೋಗುಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಈ ಮೂಲಕ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ

ಷರತ್ತು:-

1. ತಮ್ಮ ಜಿಲ್ಲೆಯಲ್ಲಿ ಸದರಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಹಾಗೂ ಉಪನ್ಯಾಸ ನೀಡಿದ ಉಪನ್ಯಾಸಕರ ಹಾಜರಾತಿ, ತರಬೇತಿ ಕಾರ್ಯಕ್ರಮದ ಹಿಮ್ಮಾಹಿತಿ
2. ಬಿಡುಗಡೆ ಮಾಡಿರುವ ಅನುದಾನವನ್ನು ಕೂಡಲೇ ಬಳಸಿಕೊಂಡು ವ್ಯತ್ಯಾಸದ ಮೊತ್ತವನ್ನು ತುರ್ತಾಗಿ ಇಲಾಖೆಯ ಗಮನಕ್ಕೆ ತರುವುದು.
3. **ಪ್ರಸ್ತುತ ನೀಡುತ್ತಿರುವ** ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಅನುದಾನ ಬಿಡುಗಡೆ ಮಾಡಿದ ಒಂದು ವಾರದೊಳಗೆ ಬಳಕೆ ಪ್ರಮಾಣ ಪತ್ರವನ್ನು ' ಜಂಟಿನಿರ್ದೇಶಕರು(ಶೈಕ್ಷಣಿಕ), ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'. ಇವರಿಗೆ ಸಲ್ಲಿಸತಕ್ಕದ್ದು.ಕಡ್ಡಾಯವಾಗಿ ನೀಡತಕ್ಕದ್ದು.
4. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಉಲ್ಲೇಖ-02ರ ಪ್ರಾವನದಲ್ಲಿ ತಿಳಿಸಿರುವ ನಿಬಂಧನೆಗಳಂತೆ ತರಗತಿ ಕಾರ್ಯಕ್ರಮಗಳಿಗೆ ಮಾತ್ರ ವೆಚ್ಚ ಭರಿಸತಕ್ಕದ್ದು.
5. ವೆಚ್ಚಕ್ಕೆ ಸಂಬಂಧಿಸಿದ ವೋಚರ್ಸ್‌ಗಳ ಪರಿಶೀಲನೆ ಮತ್ತು ಪಾವತಿ ಹೊಣೆಗಾರಿಕೆ ಜಿಲ್ಲಾಉಪನಿರ್ದೇಶಕರ ಹೊಣೆಗಾರಿಕೆ ಆಗಿರುತ್ತದೆ.
6. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನದ ವೆಚ್ಚಕ್ಕೆ ಸಂಬಂಧಿಸಿದಂತೆ ಮಾಸಿಕ ಪ್ರಗತಿ ವರದಿಯನ್ನು 'ಲೆಕ್ಕಪತ್ರಾಧಿಕಾರಿಗಳು, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'ರವರಿಗೆ ಸಲ್ಲಿಸತಕ್ಕದ್ದು.

13/2

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
5. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.